ಓ.ಎಸ್.ನಂ.186-2013
ಆರ್.ಡಬ್ಲು-2

ದಿ: 23.10.2025 ರಂದು ಎದುರುದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು**: ವಾದಿಗಳ ಪರ ಶ್ರೀಯುತ ಎ.ಎನ್.ವಿ ವಕೀಲರಿಂದ.

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು ಸಹಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ಪ್ರಸ್ತುತ ನನ್ನ ವಕೀಲರ ಹೆಸರು ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣದ ವಕೀಲರನ್ನು ನನ್ನ ತಮ್ಮ ನಾಗರಾಜುರವರು ನೇಮಿಸಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾಗರಾಜ್ ರವರು ಹೇಳಿದಂತೆ ಬರೆಯಲಾಗಿರುತ್ತದೆ ಎಂದರೆ ಸರಿ.

2. 2013 ನೇ ಸಾಲಿನಲ್ಲಿ ಲಕ್ಷ್ಮಿ ನಾರಾಯಣ್ ರವರು ನನ್ನ ಮತ್ತು ಇತರರ ವಿರುದ್ಧ ವಿಭಾಗ ಕೋರಿ ದಾವೆ ದಾಖಲಿಸಿದ್ದರು ಎಂದರೆ ಸರಿ. ಸದರಿ ಲಕ್ಷ್ಮಿ ನಾರಾಯಣ್ ರವರು ದಾಖಲಿಸಿದ್ದ ವಿಭಾಗ ದಾವೆಯಲ್ಲಿ ನನಗೆ ಸಮನ್ಸ ಜಾರಿ ಆಗಿರುತ್ತದೆ ಎಂದರೆ ಸರಿ. ಸದರಿ ಲಕ್ಷ್ಮಿ ನಾರಾಯಣ್ ರವರು ದಾಖಲಿಸಿದ್ದ ವಿಭಾಗ ದಾವೆಯ ರಾಜಿ ಸಮಯದಲ್ಲಿ ನಾನು ಮತ್ತು ಇತರರು ಹಾಜರಾಗಿದ್ದೇವು ಎಂದರೆ ಸರಿ. ನನಗೆ ಯಾರಾದರು ಓದಿ ಹೇಳಿದರೆ ಅರ್ಥವಾಗುತ್ತದೆ ಎಂದರೆ ಸರಿ.

3. ಈಗ ನನಗೆ ತೋರಿಸಿದ ನಿ.ಆರ್.2 ರಲ್ಲಿರುವ ಸಹಿಗಳು ನನ್ನದಾಗಿರುತ್ತವೆ. ಸದರಿ ನಿ.ಆರ್.2 ರಲ್ಲಿನ ಸಾಕ್ಷಿಯ ಐದು ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾಗಿ ನಿ.ಆರ್.2(ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಡವಳಿಯಲ್ಲಿರುವ ಸಹಿಗಳು ನನ್ನವು. ಸದರಿ ನಡವಳಿಯನ್ನು ನಿಸಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಸಿ.1(ಎ) ಎಂದು ಗುರುತಿಸಲಾಯಿತು. ಸದರಿ ದಿನ ರಾಜಿ ಮಾಡುವ ಸಮಯದಲ್ಲಿ ನನಗೆ ಮತ್ತು ಇತರರಿಗೆ ಯಾವೆಲ್ಲಾ ಆಸ್ತಿಗಳನ್ನು ನೀಡಲಾಗಿತ್ತು ಎನ್ನುವ ವಿಚಾರವನ್ನು ತಿಳಿಸಿದ್ದರು ಎಂದರೆ ಸಾಕ್ಷಿಯು ನನಗೆ ಏನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ನ್ಯಾಯಾಲಯದಲ್ಲಿ ರಾಜಿ ಅರ್ಜಿಯ ಕುರಿತು ನಮಗೆ ತಿಳಿಸಿರುತ್ತಾರೆ ಮತ್ತು ಅದರಂತೆ ನಾವುಗಳು ಸಹಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ನಂಬಿಕೆ ಮೇಲೆ ಸಹಿ ಮಾಡಿದ್ದೆ ಎಂದು ನುಡಿಯುತ್ತಾರೆ. ಸದರಿ ರಾಜಿ ಸಮಯದಲ್ಲಿ ಲಕ್ಷ್ಮಿ ನಾರಾಯಣ್ ರವರು ನನ್ನ ಭಾಗದ ಹಿಸ್ಸೆಯಾದ ರೂ.3,00,000/- ಹಣವನ್ನು ನನಗೆ ನೀಡಿದ್ದರು ಎಂದರೆ ಸರಿಯಲ್ಲ. ಆ ರೀತಿ ರಾಜಿ ಸಮಯದಲ್ಲಿ ನಿ.ಆರ್.೨ ರಲ್ಲಿ ನಮೂದಿಸಿರುವಂತೆ ನನಗೆ ನೀಡಿರುವ ಹಣವನ್ನು ಲಕ್ಷ್ಮಿ ನಾರಾಯಣ್ ರವರು ನೀಡಿರುವುದಿಲ್ಲ ಎನ್ನುವ ಕುರಿತು ಇಲ್ಲಿಯವರೆಗೂ ಪ್ರತ್ಯೇಕವಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ಲಕ್ಷ್ಮಿ ನಾರಾಯಣ್ ರವರು ರಾಜಿ ಅರ್ಜಿಯಂತೆ ನನಗೆ ನೀಡಬೇಕಾಗಿದ್ದ ಮೂರು ಲಕ್ಷ ಹಣವನ್ನು ನೀಡಿರುವುದಿಲ್ಲ ಎಂದು ಲಕ್ಷ್ಮಿ ನಾರಾಯಣ್ ರವರ ವಿರುದ್ಧ ಪೊ.ಠಾಣೆಯಲ್ಲಿ ಯಾವುದೇ ದೂರನ್ನು ದಾಖಲಿಸಿರುವುದಿಲ್ಲ. ಆ ರೀತಿ ರಾಜಿ ಅರ್ಜಿಯಂತೆ ಲಕ್ಷ್ಮಿ ನಾರಾಯಣ್ ರವರು ನನಗೆ ನೀಡಬೇಕಾಗಿದ್ದ ಹಣವನ್ನು ನೀಡಿರುವುದಿಲ್ಲ ಎನ್ನುವ ಕುರಿತು ಲಕ್ಷ್ಮಿ ನಾರಾಯಣ್ ರವರ ವಿರುದ್ಧ ಪೊಲೀಸ್ ಪಿರ್ಯಾದ್ದು ನೀಡಲು ನನಗೆ ಯಾವುದೇ ಅಭ್ಯಂತರ ಇರಲಿಲ್ಲ ಎಂದರೆ ಸರಿ.
ಆ ರೀತಿ ರಾಜಿ ಸಮಯದಲ್ಲಿ ಲಕ್ಷ್ಮಿ ನಾರಾಯಣ್ ರವರು ರಾಜಿ ಅರ್ಜಿಯಂತೆ ನನಗೆ ನೀಡಬೇಕಾಗಿದ್ದ ಮೂರು ಲಕ್ಷ ಹಣವನ್ನು ರಾಜಿ ಸಮಯದಲ್ಲಿ ನನಗೆ ನೀಡಿದ್ದ ಮೇರೆಗೆ ನಾನು ಇಲ್ಲಿಯವರೆಗೂ ಲಕ್ಷ್ಮಿ ನಾರಾಯಣ್ ರವರ ವಿರುದ್ಧ ಯಾವುದೇ ಪಿರ್ಯಾದ್ದನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

4. 2013 ನೇ ಸಾಲಿನ ಪೂರ್ವದಿಂದಲೂ ಲಕ್ಷ್ಮಿ ನಾರಾಯಣ್ ಮತ್ತು ನಾಗರಾಜ್ ರವರು ತಮ್ಮ ಹೆಂಡತಿ ಮಕ್ಕಳೊಂದಿಗೆ ಬೇರೆ ಬೇರೆ ಯಾಗಿ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಾಯಿ ನಾಗರಾಜ್ ರವರ ಬಳಿ ವಾಸವಾಗಿರುತ್ತಾರೆ ಮತ್ತು ನಾಗರಾಜ್ ರವರು ಅವರನ್ನು ನೋಡಿಕೊಳ್ಳುತ್ತಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಸಂಬಂಧಿಸಿದ ಹಣಕಾಸು ಮತ್ತು ಇತರ ಎಲ್ಲಾ ವ್ಯವಹಾರಗಳನ್ನು ನಾಗರಾಜ್ ರವರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನಿ.ಆರ್.೨ ರಾಜಿ ಅರ್ಜಿಯಂತೆ ನನ್ನ ತಾಯಿಗೆ ನೀಡಿದ ಜಮೀನಿನ ಪರಿಹಾರದ ಕುರಿತು ಬೆಂಗಳೂರಿನ ಪರಿಹಾರ ನ್ಯಾಯಾಲಯದಲ್ಲಿ ನಾನು ಸಹ ಹಾಜರಾಗಿದ್ದೆ ಎಂದರೆ ಸರಿಯಲ್ಲ. ಸದರಿ ಭೂ ಪರಿಹಾರ ನ್ಯಾಯಾಲಯದಲ್ಲಿ ನನ್ನ ತಾಯಿಗೆ ಸಂಬಂಧಿಸಿದ ಹದಿನೆಂಟುವರೆ ಗುಂಟೆ ಜಮೀನಿನ ಪರಿಹಾರದ ಮೊತ್ತವನ್ನು ನನ್ನ ತಾಯಿಗೆ ನೀಡುವಂತೆ ಅರ್ಜಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

5. ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಪಿ.8 ಎಂದು ಗುರುತಿಸಲಾಯಿತು. ಸದರಿ ಭೂ ಸ್ವಾಧೀನ ಪ್ರಾಧೀಕಾರದಲ್ಲಿ ನನ್ನ ತಾಯಿಗೆ ಭೂ ಸ್ವಾಧೀನ ಪರಿಹಾರ ಮೊತ್ತವಾದ ರೂ.15,68,752/- ಹಣವನ್ನು ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಭೂ ಸ್ವಾಧೀನ ಪ್ರಾಧೀಕಾರದ ಪ್ರಕರಣ ಸಂಖ್ಯೆ ಮಿಸ್ 21/2014 ರಲ್ಲಿ ಭೂ ಸ್ವಾಧೀನ ಪರಿಹಾರದ ಮೊತ್ತವನ್ನು ನನ್ನ ತಾಯಿಗೆ ನೀಡುವಂತೆ ವಕೀಲರ ಮೂಲಕ ಪ್ರತ್ಯೇಕವಾಗಿ ಅರ್ಜಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಭೂ ಸ್ವಾಧೀನ ಪ್ರಾಧೀಕಾರದಲ್ಲಿ ವಕೀಲರ ಮೂಲಕ ಹಾಜರಾಗಿ ಅರ್ಜಿ ಸಲ್ಲಿಸಿದ್ದರು ಸಲ್ಲಿಸಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಾಗರಾಜ್ ರವರು ನನ್ನನ್ನು ಪ್ರತಿದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಮಾಡುತ್ತಿದ್ದಾರೆ ಎಂದರೆ ಸರಿ. ಮೂಲ ದಾವೆ ಸಂಖ್ಯೆ 186/2013 ರಲ್ಲಿ ನನ್ನ ಪರವಾಗಿ ವಕೀಲರನ್ನು ನಾಗರಾಜ್ ರವರು ನೇಮಿಸಿರುತ್ತಾರೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಲಕ್ಷ್ಮಿ ನಾರಾಯಣ್ ರವರು ಕೆಲವು ದಾಖಲೆಗಳ ಮೇಲೆ ನನ್ನ ಸಹಿ ಪಡೆದುಕೊಂಡಿದ್ದರು ಎಂದು ಕಾಣಿಸಿರುವುದಿಲ್ಲ.

**ಮುಂದುವರೆದ ವಾಟೀ ಸವಾಲಿಗೆ ಮುಂದೂಡಲಾಯಿತು.**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.